ಮಾಡಿಸಬೇಕು, ಮತ್ತೆ ಇದರಿಂದ ಎಲ್ಲಿ ಕೊಡಬೇಕು ಮತ್ತೆ ಎಲ್ಲಿ ಕೊಡಬಾರದೆಂಬ ತೀರ್ಮಾನವನ್ನು ಮಾಡಲು ಸಾಧ್ಯವಾಗುತ್ತದೆ.

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೇ, ನಾವು ಈ ಎಲ್ಲಾ ಸಮಸ್ಯೆಗಳನ್ನು ಅಧ್ಯಯನ ಮಾಡಿದ್ದೇವೆ, ಆ ನಂತರ ಇದಕ್ಕೆ ಅಸಿಟೆಂಟ್ ಕಮಿಷನರ್ ಮತ್ತು ಸ್ಥಳೀಯವಾಗಿರುವಂತಹ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್‌ಗಳು ಇವರ ಅಧ್ಯಕ್ಷತೆಯಲ್ಲಿ ಅಕ್ರಮವಾಗಿ ಹೋಗುವಂತಹ ಮರಳನ್ನು ಹಿಡಿದು ತಕ್ಷಣ ಕ್ರಮವನ್ನು ತೆಗೆದುಕೊಳ್ಳುವಂತಹ ಪವರ್ ಇವರಿಗೆ ಇರುತ್ತದೆ. ಮತ್ತು ತಹಸೀಲ್ದಾರ್, ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ, ಮತ್ತೆ ಜಿಯಾಲಜಿಸ್ಟ್‌ಗಳೆಲ್ಲರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಿ ಇದನ್ನು ಹೇಗಾದರೂ ಮಾಡಿ ನಿಯಂತ್ರಣ ಮಾಡಬೇಕೆಂದು ಇದೆ. ನಮ್ಮ ಇಲಾಖೆಯಲ್ಲಿ ಸಿಬ್ಬಂದಿಯ ಸಂಖ್ಯೆ ಬಹಳ ಕಡಿಮೆ ಇದೆ. ನಾವು ಇದನ್ನು ಉಸ್ತುವಾರಿ ಮಾಡುವಂಥಾದ್ದು ಬಹಳ ಕಷ್ಟವಾಗಿದೆ. ಇದಕ್ಕೆ ಚೆಕ್‌ಪೋಸ್ಟ್ ಮಾಡುವಂತಹ ಪ್ರಯತ್ನವನ್ನು ಮಾಡಿದೆವು, ಆದರೆ ಅದು ಇನ್ನೊಂದು ರೀತಿಯಲ್ಲಿ ಅಕ್ರಮವಾಗುವ ಅವಕಾಶವಾಗುತ್ತದೆಂದು ಇದರ ಬಗ್ಗೆ ಸಾಕಷ್ಟು ಅಭಿಪ್ರಾಯಗಳು ವ್ಯಕ್ತವಾದವು. ಆದುದರಿಂದ ಈ ಚೆಕ್ ಪೋಸ್ಟ್ ಮಾಡುವಂತಹ ಕೆಲಸವನ್ನು ನಿಲ್ಲಿಸಿದೆವು. ಈಗ ಅಂತಿಮವಾಗಿ ಎಲ್ಲೆಲ್ಲಿ ಅಕ್ರಮವಾಗಿ ಮರಳನ್ನು ಸಾಗಾಣಿಕೆ ಮಾಡುತ್ತಾರೆಂಬ ದೂರುಗಳು ಬರುತ್ತದೆ ಆ ದೂರನ್ನು ಅಸಿಸ್ಟೆಂಟ್ ಕಮೀಷನರ್‌ಯವರಿಗಾಗಲಿ, ತಹಸೀಲ್ದಾರ್ ರವರಿಗಾಗಲೀ ಅಥವಾ ಸಂಬಂಧಪಟ್ಟಂತಹ ಕಾರ್ಯ ನಿರ್ವಾಹಣಾಧಿಕಾರಿಗಳಿಗೆ ಕೊಟ್ಟರೆ ಅವರು ತಕ್ಷಣ ಸ್ಥಳಕ್ಕೆ ಭೇಟಿ ಕೊಟ್ಟು ಈ ಅಕ್ರಮವಾಗಿ ಸಾಗಾಣಿ ಮಾಡುವಂತಹ ಮರಳನ್ನು ತಡೆಗಟ್ಟುವಂತಹ ಕೆಲಸವನ್ನು ಮಾಡುತ್ತಾರೆ, ಮತ್ತೆ ಸಾರ್ವಜನಿಕ ಸ್ಥಳಗಳಲ್ಲಿ ಇದರಿಂದ ಧಕ್ಕೆಯಾಗುತ್ತದೆ, ಅದು ಹರಾಜಾದಂತಹ ಸ್ಥಳವಾಗಿದ್ದರೂ ಸಹಿತ ಅದನ್ನು ನಿಲ್ಲಿಸುವಂಥಾದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

*ತೀರ್ಥಹಳ್ಳಿ ಪುರಪಂಚಾಯಿತಿ ನಿವೇಶನ ಹಗರಣದ ತನಿಖಾ ವರದಿ*

299 (3442) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತೀರ್ಥಹಳ್ಳಿ ಪುರಪಂಚಾಯಿತಿ ನಿವೇಶನ ಪ್ರಕರಣದ ತನಿಖಾ ಕಾರ್ಯ ಮುಗಿದಿದೆಯೇ?

ಆ) ಈ ತನಿಖಾ ವರದಿಯ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಪೌರಾಡಳಿತ ರಾಜ್ಯ ಸಚಿವರ ಪರವಾಗಿ ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :—

ಅ) ಇಲ್ಲ, (ವಿಚಾರಣೆಯಲ್ಲಿದೆ)

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೇ, ನಾನು ತೀರ್ಥಹಳ್ಳಿ ಪುರಪಂಚಾಯಿತಿ ನಿವೇಶನ ಪ್ರಕರಣದ ತನಿಖಾ ಕಾರ್ಯ ಮುಗಿದಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಸರ್ಕಾರದಿಂದ ಇಲ್ಲ, ವಿಚಾರಣೆಯಲ್ಲಿದೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಈ ವಿಚಾರವಾಗಿ ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಜಿಲ್ಲಾಧಿಕಾರಿಯವರಿಂದ ವಿಚಾರಣಾ ವರದಿ ಬಂದು ಮೂರು ತಿಂಗಳುಗಳಾಗಿದೆ. ಈಗ ಅದು ನಿಮ್ಮ ಅಧಿಕಾರಿಗಳ ಕೈಯಲ್ಲಿ ಇದೆ. ತಾವು ಯಾವ ಕಾರಣಕ್ಕಾಗಿ ಈ ವಿಚಾರಣಾ ವರದಿಯ ಆಧಾರದ ಮೇಲೆ ಕ್ರಮ ಕೈಗೊಳ್ಳುತ್ತಿಲ್ಲವೆಂಬುದು ಗೊತ್ತಾಗುತ್ತಿಲ್ಲ. ಈ ತೀರ್ಥಹಳ್ಳಿ ಪುರಪಂಚಾಯಿತಿಯೊಳಗೆ ಸುಮಾರು 45 ನಿವೇಶನಗಳು ಬಹಳ ಬೆಲೆ ಬಾಳುವಂತಹ ನಿವೇಶನಗಳಾಗಿದ್ದು, ಇದಕ್ಕೆ ಕೆಲವು ಜನರು ಸೇರಿಕೊಂಡು ನಕಲು ಸಾಗುವಳಿ ಚೀಟಿಗಳನ್ನು ಪ್ರಿಂಟ್ ಮಾಡಿ ಹಣವಂತರಿಗೆ ಹಂಚಿ ಕೋಟಿಗಟ್ಟಲೆ ಹಣವನ್ನು ಪಡೆದಿದ್ದಾರೆ. ಇದನ್ನು ಪುರ ಪಂಚಾಯಿತಿಯಲ್ಲಿ ಅಧಿಕಾರದಲ್ಲಿರುವಂತಹ ಜನರು ಇದನ್ನು ಕಂಡು ಹಿಡಿದಿದ್ದಾರೆ. ಹಿಂದೆ ಅಧಿಕಾರದಲ್ಲಿದ್ದಂತಹ ಅಧ್ಯಕ್ಷರು ಸತ್ತು ಹೋಗಿದ್ದಾರೆ, ಇವರ ಸಕಲ ಸಹಿಯನ್ನು ಸಹ ಮಾಡಲಾಗಿದೆ. ಇಲ್ಲಿ ಇಷ್ಟೊಂದು ದೊಡ್ಡ ಹಗರಣವಾಗಿದೆ, ಇದರ ಬಗ್ಗೆ ನಾನೇ ಸ್ವತ: ಮಾನ್ಯ ಮುಖ್ಯಮಂತ್ರಿಯವರಿಗೂ ಹೇಳಿದಾಗ ಇದನ್ನು ಶೀಘ್ರವಾಗಿ ತನಿಖೆ ಮಾಡಿ ವರದಿಯನ್ನು ಕೊಡಬೇಕೆಂದು ಅವರು ನೋಟ್ ಹಾಕಿ ಕೊಟ್ಟಿದ್ದಾರೆ. ಅದರಂತೆ ಜಿಲ್ಲಾಧಿಕಾರಿಗಳು ತನಿಖೆಯನ್ನು ಮಾಡಿ ವರದಿಯನ್ನು ಕೊಟ್ಟಿದ್ದಾರೆ, ಅದು ನಿಮ್ಮ ಕಡೆಗೆ ಬಂದಿದೆ. ಇದು ಆಗಿ ಮೂರು ತಿಂಗಳಾದರೂ ಸದನದಲ್ಲಿ ಇನ್ನು ವಿಚಾರಣೆಯಲ್ಲಿದೆ ಎಂದು ಹೇಳುತ್ತಿದ್ದೀರಿ. ಇಲ್ಲಿ ಈ ರೀತಿ ನಿವೇಶನಗಳನ್ನು ಯಾರು ಕದ್ದಿರುವಂತಹ ಕಳ್ಳರು ಇದ್ದಾರೆ, ಇವರಿಗೆ ಅಪ್ರತ್ಯಕ್ಷವಾಗಿ ಸರ್ಕಾರದ ಅಧಿಕಾರಿಗಳು ಏನಾದರೂ ಸಹಾಯ ಮಾಡಿದ್ದಾರೆಯೇ ಎಂಬುದನ್ನು ನೋಡಬೇಕಾಗುತ್ತದೆ. ಇವತ್ತು ತೀರ್ಥಹಳ್ಳಿಯಲ್ಲಿ ಲಾ ಅಂಡ್ ಆರ್ಡರ್ ಹಾಳಾಗುತ್ತಿದೆ. ಅಲ್ಲಿ ನಿವೇಶನಗಳನ್ನು ತೆಗೆದುಕೊಂಡಿರುವವರು ಮನೆಗಳನ್ನು ಕಟ್ಟಲು ಬರುತ್ತಿದ್ದಾರೆ. ಆದುದರಿಂದ ಈ ತನಿಖೆ ಯಾವಾಗ ಮುಗಿಯುತ್ತದೆ? ಇದು ಮುಂದುವರೆಯುವುದಾದರೆ ಯಾವ ಅಧಿಕಾರಿ ಇದನ್ನು ವಿಚಾರಣೆ ಮಾಡುತ್ತಿದ್ದಾರೆಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ತೀರ್ಥಹಳ್ಳಿ ಪುರಪಂಚಾಯಿತಿಯಲ್ಲಿ 45 ನಿವೇಶನಗಳ ಪ್ರಕರಣವಾಗಿರುವಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ನಗರಾಭಿವೃದ್ಧಿ ಇಲಾಖೆಯ ವತಿಯಿಂದ ಅಲ್ಲಿನ ಉಪ ವಿಭಾಗಾಧಿಕಾರಿಯವರ ಮುಖಾಂತರ ತನಿಖೆ ನಡೆಸುವಂತೆ ಆದೇಶವನ್ನು ನೀಡಿದ್ದೇನೆ. ಅವರೂ ಸಹ ಪ್ರಥಮ ವರದಿಯನ್ನು ಇಲಾಖೆಗೆ ಕೊಟ್ಟಿದ್ದಾರೆ.

*12.40 ಪಿ.ಎಂ.*

ಈ 45 ಜನರಲ್ಲಿ 12 ಜನರು ತೀರ್ಥಹಳ್ಳಿಯಲ್ಲೇ ವಾಸವಾಗಿದ್ದು, ಈಗಾಗಲೇ ಅಲ್ಲಿರುವ ಮುಖ್ಯಾಧಿಕಾರಿಗಳು ಇತರೆಯವರನ್ನು ಅಲ್ಲಿಂದ ತೆಗೆದುಹಾಕಿ ಈಗ ಹೊಸ ಮುಖ್ಯಾಧಿಕಾರಿಗಳ ಮುಖಾಂತರ ನಡೆದಿರುವ ಎಲ್ಲಾ ವ್ಯವಹಾರದ ಮಾಹಿತಿಯನ್ನು ಕೇಳಿದ್ದಾರೆ ಅದು ಸರ್ಕಾರದ ಗಮನಕ್ಕೆ ಬಂದಿದೆ. ಪ್ರಾಯಶ: ಇನ್ನು ಮೂರು ತಿಂಗಳೊಳಗಾಗಿ ಈ ವರದಿಯನ್ನು ಪರಿಶೀಲಿಸಿ ಆ ಅಧಿಕಾರಿಗಳ ವಿರುದ್ಧ ಕೂಡ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಡಿ.ವಿ. ಸದಾನಂದಗೌಡ :— ತಾವು ವಿಚಾರಣೆಯನ್ನು ನಿಧಾನಮಾಡುವುದರಿಂದ ಇಂತಹ ಭೂಕಬಳಿಕೆದಾರರಿಗೆ ಪರೋಕ್ಷವಾಗಿ ಬೆಂಬಲಕೊಟ್ಟಂತಾಗುತ್ತದೆ. ಮೂರು ತಿಂಗಳಾದರೂ ಆಗಲಿಲ್ಲ, ಈ ಸರ್ಕಾರಕ್ಕೆ ಕ್ರಮ ತೆಗೆದುಕೊಳ್ಳಲು. ಇನ್ನೂ ಮೂರು ತಿಂಗಳ ಅವಶ್ಯಕತೆ ಇದೆ ಎಂದು ಹೇಳಿದರೆ ಸರ್ಕಾರ ಪರೋಕ್ಷವಾಗಿ ಅಂತಹವರಿಗೆ ಬೆಂಬಲ ಕೊಟ್ಟಂತಾಗುತ್ತದೆ; ಶೀಘ್ರವಾಗಿ ತನಿಖೆ ಮಾಡಿ ಅಂತಹವರಿಗೆ ಶಿಕ್ಷೆ ಕೊಟ್ಟಿದ್ದರೆ ಮತ್ತೊಬ್ಬರು ಮತ್ತೆ ಇಂತಹ ಕೆಲಸ ಮಾಡದಂತಹ ಎಚ್ಚರಿಕೆ ಬರುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ತಮ್ಮ ಪ್ರಶ್ನೆಯಲ್ಲಿ ಏನು ಹೇಳಿದ್ದಾರೆಂದರೆ, ಅಧ್ಯಕ್ಷರು ಹಾಗೂ ಅಲ್ಲಿ ಆಡಳಿತ ನಿರ್ವಹಿಸುವಂತಹ ಅಧಿಕಾರಿ ಇಬ್ಬರು ಫೋರ್ಜರಿ ದಸ್ಕತ್ತನ್ನು ಹಾಕಿದ್ದಾರೆಂದು ಸ್ವತ: ಅವರೇ ಹೇಳಿದ್ದಾರೆ.

[illegible]
ಹೇಳಲಿಲ್ಲ, ಕಂಡು ಹಿಡಿದವರನ್ನು ಇವರು ಅಪರಾಧಿಗಳನ್ನಾಗಿ ಮಾಡುತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಅಲ್ಲಿ ಏನಿದೆ ಎಂದರೆ, ಅಧ್ಯಕ್ಷರ ಹಾಗೂ ಅಧಿಕಾರಿಗಳ ಫೋರ್ಜರಿ ದಸ್ಕತ್ತು ಹಾಕಿದ್ದಾರೆಂದು ನೀವು ಹೇಳಿದ್ದಿರಿ, ಈಗ ಅಲ್ಲಿ ಚುನಾಯಿತ ಪ್ರತಿನಿಧಿಗಳಿದ್ದಾರೆ, ಚುನಾವಣೆ ನಡೆದಿದೆ, ಮುಖ್ಯಾಧಿಕಾರಿಗಳು ಒಂದು ವರದಿಯನ್ನು ನೀಡಿದ ನಂತರವೇ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಕನಿಷ್ಟ ವರದಿ ಸಲ್ಲಿಸುವುದಕೋಸ್ಕರವಾದರೂ ಸಮಯ ನಿಗದಿಪಡಿಸಲು ಮೂರು ತಿಂಗಳು ಎಂದು ಹೇಳಿದೆ, ವರದಿ ಬಂದ ತಕ್ಷಣ ಆ ರೀತಿಯ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಆರಗ ಜ್ಞಾನೇಂದ್ರ :— ಅಧ್ಯಕ್ಷರೆ, ಈಗ ಅವರು ತಪ್ಪಾಗಿ ಹೇಳಿಬಿಟ್ಟಿದ್ದಾರೆ, ದಾಖಲೆಗೆ ಹೋಗಿದೆ, ಮುಖ್ಯಾಧಿಕಾರಿಯನ್ನು ತೆಗೆದು ಹಾಕಿದ್ದೇವೆಂದು ಹೇಳಿದ್ದಾರೆ,

ನಿನ್ನೆಯವರೆಗೆ ಅವರನ್ನು ತೆಗೆದು ಹಾಕಿಲ್ಲ, ಇವತ್ತು ಅವರಿಗೆ ನಾನು ದೂರವಾಣಿ ಮಾಡಲಿಲ್ಲ, ನಿನ್ನೆ ರಾತ್ರಿಯವರೆಗೆ ಅವರು ಇದ್ದರು, ತೀರ್ಥಹಳ್ಳಿ ಮುಖ್ಯಾಧಿಕಾರಿಗಳನ್ನು ತೆಗೆದುಹಾಕಿದ್ದೇವೆಂದು ಮಂತ್ರಿಗಳು ಇಲ್ಲಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಉಪ ವಿಭಾಗಾಧಿಕಾರಿಗಳು ಸಂಪೂರ್ಣವಾಗಿ ನಡೆದಿರುವ ಘಟನೆಯ ಮಾಹಿತಿಯನ್ನು ಸರ್ಕಾರಕ್ಕೆ ರವಾನಿಸಿದ್ದಾರೆ. ಅದನ್ನು ಆಧಾರವಾಗಿಟ್ಟುಕೊಂಡು ಅಲ್ಲಿರುವ ಮುಖ್ಯಾಧಿಕಾರಿಗಳು ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿಕೊಡುವಂತೆ ಉಪ ವಿಭಾಗಾಧಿಕಾರಿಗಳು ಕೇಳಿದ್ದಾರೆ, ಆ ಮಾಹಿತಿ ಬಂದ ತಕ್ಷಣ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಆರಗಜ್ಞಾನೇಂದ್ರ :— ಉಪ ವಿಭಾಗಾಧಿಕಾರಿಗಳು ಒಂದು ಸಾರಿ ಸಂಪೂರ್ಣವಾಗಿ ತನಿಖೆ ನಡೆಸಿದ್ದಾರೆ, ಯಾರ್ಯಾರು ಸಹಕರಿಸಬೇಕೋ ಅವರು ಸಹಕರಿಸಿದ್ದಾರೆ. ನಿರ್ಣಯ ಪುಸ್ತಕವನ್ನು ಯಾರದೋ ಮನೆಯಲ್ಲಿಟ್ಟುಕೊಂಡು ತಿದ್ದಿ 20-30 ಹೆಸರುಗಳನ್ನು ಸೇರಿಸಿದ್ದಾರೆ. ಸಾಗುವಳಿ ಚೀಟಿಯನ್ನು ಪೋರ್ಜರಿಯಾಗಿ ಸತ್ತುಹೋದ ಅಧ್ಯಕ್ಷರ ಸಹಿ ಮಾಡಿ ಹಂಚಿದ್ದಾರೆ. ಅದರ ಆಧಾರದ ಮೇಲೆ ಜನರು ಈಗ ನನಗೆ ರಿಜಿಸ್ಟ್ರೇಷನ್ ಮಾಡಿಕೊಡಿ, ಲೈಸನ್ಸ್ ಕೊಡಿಸಿ ಎಂದು ಅರ್ಜಿಯನ್ನು ಕೊಟ್ಟಿದ್ದಾರೆ. ಆ ಅರ್ಜಿದಾರನನ್ನು ಹಿಡಿದುಕೊಂಡು ತನಿಖೆ ಮಾಡಿದರೆ ಎಲ್ಲಾ ಸಿಗುತ್ತದೆ, ಅಲ್ಲಿ ತನಿಖೆಯನ್ನೇ ಮುಂದುವರೆಸುತ್ತಿಲ್ಲ, ನಾವೊಂದು ತನಿಖೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದೇವೆ. ಸರ್ಕಾರದಿಂದ ಏನು ಆದೇಶ ಬರಲಿಲ್ಲವೆಂದು ಕೈಚೆಲ್ಲಿಕೊಂಡು ಕುಳಿತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ನಿವೇಶನದ ಹಗರಣ ತನಿಖೆ ಆ ಪಂಚಾಯಿತಿಯ ಬಗ್ಗೆ ನಡೆಯುತ್ತಿದೆ. ಯಾರೆ ಪರವಾನಿಗೆಗಾಗಿ ಅರ್ಜಿ ಸಲ್ಲಿಸಿರುವವರಿದ್ದರೂ ಕೂಡ ಪರವಾನಿಗೆ ನೀಡಲಾಗುವುದಿಲ್ಲ, ತನಿಖೆ ಬೇಗ ಮುಗಿಸುವಂತೆ ಸರ್ಕಾರ ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಳ್ಳುವುದು.

*1. (ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು*

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :— ಮಾನ್ಯ ಅಧ್ಯಕ್ಷರೆ, 20ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 70 ಪ್ರಶ್ನೆಗಳ ಪೈಕಿ 60 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

*ಕೊಡಗು ಜಿಲ್ಲೆಯಲ್ಲಿ ಕಲ್ಲುಗಣಿಗಾರಿಕೆ ಪ್ರಾರಂಭಿಸಲು ಅನುಮತಿ ನೀಡಿಕೆ.*

2641 (3061) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ):— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.